ಈ ಲೇಖನದ ವಿಷಯಾನುಕ್ರಮಣಿಕೆ


**ದೀಪಾವಳೀ ಆಚರಣೆ — 5** 2

**ಅಮಾವಾಸ್ಯೆಯಂದು ಮಹಾಲಕ್ಷ್ಮೀಪೂಜಾ** 2

**ಅಮಾವಾಸ್ಯೆಯಂದೂ ಅಭ್ಯಂಗವಿದೆ** 3

**ಲಕ್ಷ್ಮೀಪೂಜಾವಿಧಾನ** 5

**ವಿಶೇಷಪೂಜಾಕ್ರಮ** 10

**ಲಕ್ಷ್ಮೀ ಆಗಮನ** 12

**ಅಲಕ್ಷ್ಮೀತ್ಯಾಗ** 13

## ದೀಪಾವಳೀ ಆಚರಣೆ — 5

## ಅಮಾವಾಸ್ಯೆಯಂದು ಮಹಾಲಕ್ಷ್ಮೀಪೂಜಾ

ದೀಪಾವಳಿಯ ಐದು ದಿವಸಗಳಲ್ಲಿ ಮೊದಲ ಮೂರು ದಿವಸಗಳ ವಿಧಿಯನ್ನು ತಿಳಿದೆವು. ಈಗ ನಾಲ್ಕನೆಯ ದಿವಸವಾದ ಆಮಾವಾಸ್ಯೆಯಂದು ಮಾಡಬೇಕಾದ ಲಕ್ಷ್ಮೀಪೂಜಾವಿಧಾನವನ್ನು ತಿಳಿಯೋಣ.

ಉತ್ಥಾನದ್ವಾದಶಿಯಂದು ಶ್ರೀಹರಿ ಯೋಗನಿದ್ರೆಯಿಂದ ಎದ್ದೇಳುತ್ತಾನೆ, ಪತ್ನಿಯಾದವಳು ಗಂಡನಿಗಿಂತ ಮುಂಚೆ ಎದ್ದೇಳಬೇಕು ಎಂಬ ನಿಯಮದಂತೆ ಲಕ್ಷ್ಮೀದೇವಿಯರು ನರಕಚತುರ್ದಶಿಯ ದಿವಸ ಎದ್ದೇಳುತ್ತಾರೆ. ಹೀಗಾಗಿ ನರಕಚತುರ್ದಶಿಯಂದು ಮಹಾಲಕ್ಷ್ಮಿಗೆ ಅರ್ಚನೆ, ನೀರಾಜನಗಳನ್ನು ಮಾಡಬೇಕು. ಅದರ ಕ್ರಮವನ್ನು ತಿಳಿದೆವು.

ಮನೆಯಲ್ಲಿ ಸಾತ್ವಿಕ ಸಂಪತ್ತು ಸ್ಥಿರವಾಗಿ ನೆಲೆಯೂರಬೇಕು ಎನ್ನುವ ಕಾರಣಕ್ಕೆ, ಮಹಾಲಕ್ಷ್ಮೀದೇವಿಯ ಅನುಗ್ರಹವನ್ನು ಪಡೆಯಲಿಕ್ಕಾಗಿ ಆಶ್ವೀನ ಅಮಾವಾಸ್ಯೆಯಂದು ಲಕ್ಷ್ಮೀದೇವಿಯ ಪೂಜೆಯನ್ನು ಮಾಡಬೇಕು.

## ಅಮಾವಾಸ್ಯೆಯಂದೂ ಅಭ್ಯಂಗವಿದೆ

ನರಕಚತುರ್ದಶಿಯ ಅಭ್ಯಂಗವನ್ನು ವಿಧವೆಯರು, ಸಂನ್ಯಾಸಿಗಳು ಎಲ್ಲರೂ ಮಾಡಬೇಕು. ಆದರೆ, ಅಮಾವಾಸ್ಯೆಯಂದು ಲಕ್ಷ್ಮೀಪೂಜೆಯನ್ನು ಮಾಡುವವರು ಮಾತ್ರ ಮಾಡಬೇಕು. ಅಭ್ಯಂಗವನ್ನು ಮಾಡಿಕೊಳ್ಳದೇ ಲಕ್ಷ್ಮೀಪೂಜೆಯನ್ನು ಮಾಡುವಂತಿಲ್ಲ.

ನರಕಚತುರ್ದಶಿಯಂದು ಮಾಡುವಂತೆ ಬೆಳಗು ಜಾವದಲ್ಲಿಯೇ ಅಭ್ಯಂಗ ಮಾಡಬೇಕಾದ ಆವಶ್ಯಕತೆಯಿಲ್ಲ.

ಆ ದಿವಸ ಸಾಮಾನ್ಯವಾಗಿ ಸ್ವಾತೀನಕ್ಷತ್ರವಿರುತ್ತದೆ. ಸ್ವಾತೀನಕ್ಷತ್ರ ಆರಂಭವಾದ ಮೇಲೆ ಅಭ್ಯಂಗ ಮಾಡಿದರೆ ಶ್ರೇಷ್ಠ ಸಂಪತ್ತು ದೊರೆಯುತ್ತದೆ. ಸ್ವಾತಿ

ನಕ್ಷತ್ರ ಮಧ್ಯಾಹ್ನದ ಮೇಲೆ ಆರಂಭವಾಗುವದಿದ್ದರೆ ಬೆಳಿಗ್ಗೆಯೇ ಅಭ್ಯಂಗವನ್ನು ಮಾಡಬೇಕು.

ಈ ಸಂದರ್ಭದಲ್ಲಿ ಸೂರ್ಯನೂ ಸ್ವಾತಿ ನಕ್ಷತ್ರದಲ್ಲಿರುತ್ತಾನೆ. ಚಂದ್ರನೂ ಸ್ವಾತಿಯಲ್ಲಿದ್ದಾಗ[1] ಸ್ನಾನ ಮಾಡಿದರೆ ಸಕಲಸಂಪತ್ತುಗಳೂ ದೊರೆಯುತ್ತವೆ ಎಂದು ಶಾಸ್ತ್ರ ತಿಳಿಸುತ್ತದೆ—

**ಸ್ವಾತೀಸ್ಥಿತೇ ರವಾವಿಂದುಃ**
**ಯದಿ ಸ್ವಾತಿಗತೋ ಭವೇತ್ ।**
**ಪಂಚತ್ವಗುದಕಸ್ನಾಯೀ**
**ಕೃತಾಭ್ಯಂಗವಿಧಿರ್ನರಃ।**

**ನೀರಾಜಿತೋ ಯದಾ ಲಕ್ಷ್ಮೀಂ**
**ಅರ್ಚಯೇತ್ ಸುಸಮಾಹಿತಃ**
**ಸರ್ವಸಂಪದಮಾಪ್ನೋತಿ**
**ಲಕ್ಷ್ಮೀಸ್ತತ್ರೈವ ತಿಷ್ಠತಿ ।**

---

[1] ಪಂಚಾಂಗದಲ್ಲಿ ಸ್ವಾತಿನಕ್ಷತ್ರ ಎಷ್ಟು ಗಂಟೆಗೆ ಆರಂಭವಾಗಿ ಎಷ್ಟುಗಂಟೆಗೆ ಮುಗಿಯುತ್ತದೆ ಎಂಬ ವಿವರವಿರುತ್ತದೆ.

ಸೂರ್ಯಚಂದ್ರರಿಬ್ಬರೂ ಸ್ವಾತಿಯಲ್ಲಿರಬೇಕು. ಆ ದಿವಸ ಮೈಗೆ ಎಣ್ಣೆಯನ್ನು ಹಚ್ಚಿಕೊಂಡು ಅತ್ತಿ, ಆಲ, ಅರಳೀ, ಮಾವು, ಮತ್ತು ಬಿಳಲುಗಳುಳ್ಳ ಆಲದ ಮರ ಈ ಐದು ಮರಗಳ ತೊಗಟೆಗಳನ್ನು[2] ಬಿಸಿನೀರಿಗೆ ಹಾಕಿ ಆ ನೀರಿನಿಂದ ಸ್ನಾನವನ್ನು ಮಾಡಬೇಕು. ಆ ನಂತರ ಆರತಿಯನ್ನು ಮಾಡಿಸಿಕೊಳ್ಳಬೇಕು. ಬಳಿಕ ಮತ್ತೆ ಸ್ನಾನವನ್ನು ಮಾಡಿ ಮಹಾಲಕ್ಷ್ಮೀದೇವಿಯ ಪೂಜೆಯನ್ನು ಶುದ್ಧವಾದ ಮನಸ್ಸಿನಿಂದ ಮಾಡಿದಲ್ಲಿ ಸಮಸ್ತ ಸಂಪತ್ತನ್ನೂ ಪಡೆಯುತ್ತಾನೆ. ಲಕ್ಷ್ಮೀದೇವಿಯರು ಅವನ ಮನೆಯಲ್ಲಿಯೇ ವಾಸಮಾಡುತ್ತಾರೆ.

## ಲಕ್ಷ್ಮೀಪೂಜಾವಿಧಾನ

ವರಮಹಾಲಕ್ಷ್ಮಿ, ಅನಂತವ್ರತ ಮುಂತಾದವಂತೆ ಕಲಶವನ್ನಿಟ್ಟು ಲಕ್ಷ್ಮೀಪೂಜೆಯನ್ನು ಮಾಡುವಂತೆ ಈ ದಿವಸ ಮಾಡುವಂತಿಲ್ಲ.

---

[2] ಉದುಂಬರವಟಾಶ್ವತ್ಥಚೂತನ್ಯಗ್ರೋಧಪಲ್ಲವಾಃ|
ಪಂಚಭಂಗಾ ಇತಿ ಖ್ಯಾತಾಃ ಸರ್ವಕರ್ಮಸು ಶೋಭನಾಃ |

ಮನೆಯಲ್ಲಿ ಲಕ್ಷ್ಮೀಸನ್ನಿಧಾನಯುಕ್ತವಾದ ಪ್ರತಿಮೆ, ಶಂಖಾದಿಗಳು ಇರುತ್ತವೆ ಅವುಗಳಿಗೇ ಪೂಜೆಯನ್ನು ಸಲ್ಲಿಸಬೇಕು.

ಮತ್ತು, ಲಕ್ಷ್ಮೀಪೂಜೆಯನ್ನು ಶ್ರೀಹರಿಪೂಜೆಯಿಲ್ಲದೆ ಮಾಡುವಂತಿಲ್ಲ, ಶ್ರೀಹರಿಪೂಜೆ ಲಕ್ಷ್ಮೀಪೂಜೆಯಿಲ್ಲದೆ ಮಾಡುವಂತಿಲ್ಲ. ಹೀಗಾಗಿ ಮನೆಯಲ್ಲಿರುವ ಸಾಲಿಗ್ರಾಮದಲ್ಲಾಗಲೀ ಲಕ್ಷ್ಮೀನಾರಾಯಣರಿಬ್ಬರ ಸನ್ನಿಧಾನವಿರುತ್ತದೆ, ಹಾಗೆಯೆ ಲಕ್ಷ್ಮೀನಾರಾಯಣ, ಲಕ್ಷ್ಮೀನೃಸಿಂಹ ಮುಂತಾದ ಪ್ರತಿಮೆಗಳಿಗೆ ಅಥವಾ ಮುಖ್ಯವಾಗಿ ಬಲಮುರಿಶಂಖಕ್ಕೆ ಈ ದಿವಸ ಪೂಜೆಯನ್ನು ಸಲ್ಲಿಸಬೇಕು.

ಬಲಮುರಿಶಂಖಕ್ಕೆ ಪೂಜೆಯನ್ನು ಸಲ್ಲಿಸುವದರಿಂದ ಸಾತ್ವಿಕವಾದ ಅತುಲ ಸಂಪತ್ತು ದೊರೆಯುತ್ತದೆ. ಹೀಗಾಗಿ ಅದರ ಪೂಜೆ ವಿಶೇಷ.

ಪ್ರತೀನಿತ್ಯ ಪೂಜೆ ಮಾಡುವಂತೆ ಸಾಲಿಗ್ರಾಮಾದಿಗಳಿಗೆ ಪೂಜೆಯನ್ನು ಮಾಡುವಾಗಲೇ ಲಕ್ಷ್ಮೀಪೂಜೆಯನ್ನು ಮಾಡಬೇಕು.

ಪುರುಷಸೂಕ್ತದಿಂದ ಅಭಿಷೇಕವನ್ನು ಮಾಡುವಾಗಲೆ ಶ್ರೀಸೂಕ್ತ, ಅಂಭೃಣೀಸೂಕ್ತವನ್ನು ಪಠಿಸುತ್ತ ಲಕ್ಷ್ಮೀದೇವಿಗೆ ಅಭಿಷೇಕವನ್ನು ಮಾಡಬೇಕು.

ಆ ನಂತರ ಶ್ರೀಮದಾಚಾರ್ಯರು ರಚನೆ ಮಾಡಿರುವ ದ್ವಾದಶಸ್ತೋತ್ರದಲ್ಲಿನ ವಿಶ್ವಸ್ಥಿತಿಪ್ರಲಯಸರ್ಗ ಎಂಬ ದಿವ್ಯ ಸ್ತೋತ್ರವನ್ನು ಪಠಿಸುತ್ತ ಅರ್ಚನೆಯನ್ನು ಮಾಡಬೇಕು.

ಬಳಿಕ ಮಾದನೂರಿನ ಶ್ರೀ ವಿಷ್ಣುತೀರ್ಥರು ಮುಂತಾದ ಜ್ಞಾನಿಗಳು ರಚಿಸಿರುವ ಲಕ್ಷ್ಮೀಸ್ತೋತ್ರವನ್ನು ಪಠಿಸುತ್ತ[3] ಅರ್ಚನೆಯನ್ನು ಮಾಡಬೇಕು.

ವಿಶೇಷವಾದ ಭಕ್ಷ್ಯಭೋಜ್ಯಗಳನ್ನು, ಮುಖ್ಯವಾಗಿ ಪಾಯಸವನ್ನು ಮಾಡಿ ನೈವೇದ್ಯವನ್ನು ಮಾಡಬೇಕು.

---

[3] ಶ್ರೀ ಮಾದನೂರು ವಿಷ್ಣುತೀರ್ಥರು ರಚಿಸಿರುವ ರಮಾಸ್ತೋತ್ರದ ಪಾರಾಯಣ ವಿಶ್ವನಂದಿನಿಯಲ್ಲಿ ಉಪಲಬ್ಧವಿದೆ. VNU363

ಮಂಗಳಾರತಿಯ ಸಮಯದಲ್ಲಿ ಬೆಳ್ಳಿಯ ತಟ್ಟೆಯಲ್ಲಿ ಅರಿಶಿನಕುಂಕುಮಗಂಧದ ನೀರಿನಲ್ಲಿ ಎರಡು ದೀಪಗಳನ್ನಿಟ್ಟು ನೀರಾಜನವನ್ನು ಮಾಡಬೇಕು.

ಆ ನಂತರ ಭಕ್ತಿಯಿಂದ ನಮಸ್ಕಾರಗಳನ್ನು ಸಮರ್ಪಿಸಬೇಕು.

ಸಂಜೆಯ ಸಮಯದಲ್ಲಿ ಮನೆಯ ಸುತ್ತಲೂ ದೀಪವನ್ನು ಬೆಳಗಿಸಿ, ಮನೆಯಲ್ಲಿ ಅಥವಾ ಮನೆಯ ಹೊರಗೆ ಮರಗಳಿದ್ದರೆ ಅದರ ಬುಡದಲ್ಲಿ ದೀಪಗಳನ್ನು ಬೆಳಗಿಸಿ, ತುಳಸಿಯ ಮುಂದೆ, ದೇವರ ಮನೆಯ ಮುಂದೆ ದೀಪವನ್ನು ಬೆಳಗಿಸಿ ಮಹಾಲಕ್ಷ್ಮಿಯ ಕುರಿತಾದ ದೇವರನಾಮಗಳನ್ನು ಹಾಡಬೇಕು.

ಶ್ರೀ ವಿದ್ಯಾರತ್ನಾಕರತೀರ್ಥಶ್ರೀಪಾದಂಗಳವರು ತಮ್ಮ ಪೂರ್ವಾಶ್ರಮದಲ್ಲಿ ಶ್ರೀನಾಮಗಿರಿ-ಕ್ಷೇತ್ರದಲ್ಲಿರುವ ಮಹಾಲಕ್ಷ್ಮೀದೇವಿಯರ ವಿಶೇಷ ಸೇವೆಯನ್ನು ಮಾಡಿ ಲಕ್ಷ್ಮೀ ನರಸಿಂಹರ ಸಾಕ್ಷಾತ್ಕಾರವನ್ನು ಪಡೆದವರು. ಅವರಿಗೆ

ನಾಮಗಿರಿಯಮ್ಮನವರು ಕನಸಿನಲ್ಲಿ ಐದು ಹಲ್ಲಿನ ದಂತದ ಬಾಚಣಿಗೆಯನ್ನು ಅನುಗ್ರಹಿಸಿದ್ದಾರೆ[4]. ಹೀಗೆ ಲಕ್ಷ್ಮೀದೇವಿಯರ ವಿಶೇಷಾನುಗ್ರಹವನ್ನು ಪಡೆದ ಸಿದ್ಧಿಗಳಿಸಿದ ಆ ಮಹಾನುಭಾವರು ಲಕ್ಷ್ಮೀದೇವಿಯರ ಕುರಿತು ರಚಿಸಿರುವ ಹಾಡುಗಳನ್ನು ಹಾಡಬೇಕು. ಬಹುಬೇಗನೇ ಇಷ್ಟಾರ್ಥಗಳನ್ನು ಕರುಣಿಸುವ ಶ್ರೇಷ್ಠ ಕೃತಿಗಳವು.

ರಾತ್ರಿಯೂ ಸಹ ಹಾಲು, ಹಣ್ಣುಗಳನ್ನು ಲಕ್ಷ್ಮೀನಾರಾಯಣರಿಗೆ ನೈವೇದ್ಯ ಮಾಡಿ ಕೊಲ್ಹಾಪುರ, ಕುಂಜಾರುಗಿರಿ, ಕಲ್ಲೂರು ಮುಂತಾದ ಕ್ಷೇತ್ರಗಳಲ್ಲಿರುವ ಲಕ್ಷ್ಮೀದೇವಿಯನ್ನು ಮನಸಾರೆ ಸ್ಮರಿಸಿ ಭಕ್ತಿಯಿಂದ ಸಾಷ್ಟಾಂಗ ನಮಸ್ಕಾರಗಳನ್ನು ಸಮರ್ಪಿಸಬೇಕು.

ಇದು ಸಾಮಾನ್ಯವಾದಂತಹ ಪೂಜಾಕ್ರಮ.

---

[4] ಆ ಇತಿಹಾಸವನ್ನು ಅವರ ಚರಿತ್ರವರ್ಣನೆಯ ಸಂದರ್ಭದಲ್ಲಿ ತಿಳಿಸುತ್ತೇನೆ.

## ವಿಶೇಷಪೂಜಾಕ್ರಮ

ಭವಿಷ್ಯಪುರಾಣ ವಿಶೇಷವಾದ ಮತ್ತೊಂದು ಕ್ರಮವನ್ನು ತಿಳಿಸುತ್ತದೆ.

**ದಿವಾ ತತ್ರ ನ ಭೋಕ್ತವ್ಯಂ**
**ಋತೇ ಬಾಲಾತುರಾಜ್ಜನಾತ್**
**ಪ್ರದೋಷಸಮಯೇ ಲಕ್ಷ್ಮೀಂ**
**ಪೂಜಯಿತ್ವಾ ತತಃ ಕ್ರಮಾತ್**

ಆಮಾವಾಸ್ಯೆಯ ಸಾಯಂಕಾಲದಂದೇ ಪ್ರದೋಷಕಾಲದಲ್ಲಿ ಲಕ್ಷ್ಮೀಪೂಜೆಯನ್ನು ಮಾಡಬೇಕು. ಹೀಗಾಗಿ ಪೂಜೆ ಮಾಡುವವರು ಬೆಳಗಿನಿಂದ ಉಪವಾಸವಿದ್ದು ಪೂಜೆಯನ್ನು ಮಾಡಬೇಕು. ಮಕ್ಕಳು ವೃದ್ಧರು ಉಣ್ಣಬಹುದು.

ಈ ರೀತಿ ಸಂಜೆ ಲಕ್ಷ್ಮೀಪೂಜೆಯನ್ನು ಮಾಡುವವರು ಬೆಳಿಗ್ಗೆ ಹೇಮಶ್ರಾದ್ಧ ಅಥವಾ ಆಮಶ್ರಾದ್ಧವನ್ನು ಮಾಡಬೇಕು ಎಂದು ಪದ್ಮಪುರಾಣ ತಿಳಿಸುತ್ತದೆ —

**ಗೃಹಸ್ಥೇನ ಪ್ರಕರ್ತವ್ಯಂ**
**ರಾತ್ರೌ ಭೋಜನಮಂಗಲಮ್ ।**

**ದಿವಾಶ್ರಾದ್ಧಂ ಪ್ರಕರ್ತವ್ಯಂ**
**ಹೇಮ್ನಾ ಚಾಮೇನ ವೈ ತಥಾ ||**

ಸಂಜೆ ಲಕ್ಷ್ಮೀಪೂಜೆ ಮುಗಿದ ನಂತರ ಮರಗಳ ಕೆಳಗೆ, ದೇವಸ್ಥಾನಗಳಲ್ಲಿ, ದೇವರ ಮನೆಯಲ್ಲಿ ದೀಪಗಳನ್ನು ಬೆಳಗಿಸಬೇಕು.

**ದೀಪವೃಕ್ಷಾಶ್ಚ ದಾತವ್ಯಾಃ**
**ಶಕ್ತ್ಯಾ ದೇವಗೃಹೇಷು ಚ**

ರಾತ್ರಿಯಲ್ಲಿ **"ಸ್ವಲಂಕೃತೇನ ಭೋಕ್ತವ್ಯಂ ಸಿತವಸ್ತ್ರೋಪಶೋಭಿನಾ"** ಬೆಳ್ಳಗಿನ ಶುಭ್ರವಾದ ಬಟ್ಟೆಗಳನ್ನುಟ್ಟು ಅಲಂಕೃತರಾಗಿ ಊಟವನ್ನು ಮಾಡಬೇಕು.

ಈ ರೀತಿಯಾಗಿ ಉಪವಾಸವಿದ್ದು ಸಂಜೆ ಪೂಜೆ ಮಾಡುವದು ವಿಶೇಷಫಲವನ್ನು ನೀಡುತ್ತದೆ. ಸಾಧ್ಯವಿಲ್ಲದವರು ಬೆಳಿಗ್ಗೆಯೇ ಪೂಜೆ ಭೋಜನಗಳನ್ನು ಮುಗಿಸಿ, ಸಂಜೆ ಪ್ರದೋಷದ ವೇಳೆಯಲ್ಲಿಯೂ ಪೂಜೆಯನ್ನು ಮಾಡಬೇಕು.

## ಲಕ್ಷ್ಮೀ ಆಗಮನ

ದೀಪಾವಳೀ ಅಮಾವಾಸ್ಯೆಯ ರಾತ್ರಿಯಂದು ಮಹಾಲಕ್ಷ್ಮೀನಾರಾಯಣರು ಸಂಚಾರ ಮಾಡುತ್ತಾರೆ. ಯಾವ ಮನೆ ಅತ್ಯಂತ ಶುಭ್ರವಾಗಿದೆಯೋ, ಹೂ, ತೋರಣಗಳಿಂದ ಅಲಂಕೃತವಾಗಿದೆಯೋ, ಯಾವ ಮನೆಯ ಮುಂದೆ ದೀಪಗಳು ಬೆಳಗುತ್ತಿವೆಯೋ ಆ ಮನಯನ್ನು ಆ ಆದಿದಂಪತಿಗಳು ಪ್ರವೇಶ ಮಾಡುತ್ತಾರೆ.  ಅದಕ್ಕಾಗಿ ಅರ್ಧರಾತ್ರಿಯವರೆಗೆ ಎದ್ದಿದ್ದು, ಮಹಾಲಕ್ಷ್ಮೀದೇವಿಯ ಮಾಹಾತ್ಮ್ಯವನ್ನು ಚಿಂತನೆ ಮಾಡುತ್ತ ದೀಪಗಳನ್ನು ಬೆಳಗಿಸುತ್ತಿರಬೇಕು ಎಂದು ಬ್ರಹ್ಮಪುರಾಣ ತಿಳಿಸುತ್ತದೆ —

**ಅರ್ಧರಾತ್ರೇ ಭ್ರಮತ್ಯೇವ**
**ಲಕ್ಷ್ಮೀರಾಶ್ರಯಿತುಂ ಗೃಹಾನ್ ।**
**ಅತಃ ಸ್ವಲಂಕೃತಾ ಲಿಪ್ತಾಃ**
**ದೀಪೈರ್ಜಾಗ್ರಜ್ಜನೋತ್ಸವಾಃ।**
**ಸುಧಾಧವಲಿತಾಃ ಕಾರ್ಯಾಃ**
**ಪುಷ್ಪಮಾಲೋಪಶೋಭಿತಾಃ ।**

## ಅಲಕ್ಷ್ಮೀತ್ಯಾಗ

ಮನೆಗೆ ಲಕ್ಷ್ಮೀಪ್ರವೇಶವಾದರೆ ಅಲಕ್ಷ್ಮಿಗೆ ಸ್ಥಾನವಿರುವದಿಲ್ಲ. ಲಕ್ಷ್ಮಿಯ ಪ್ರವೇಶವಾಗುತ್ತಿದ್ದಂತೆ ಅಲಕ್ಷ್ಮಿಯ ವಿನಾಶವಾಗುತ್ತದೆ.

ಹಿಂದೆ ರಾಜರುಗಳ ಕಾಲದಲ್ಲಿ ವೇಶ್ಯಾಸ್ತ್ರೀಯರು ಮಧ್ಯರಾತ್ರಿಯ ನಂತರ ಮೊರಗಳನ್ನು, ತಮಟೆಗಳನ್ನು ಬಾರಿಸುತ್ತ ಅಲಕ್ಷ್ಮಿಯನ್ನು ಊರಿಂದ ಹೊರ ಹಾಕುತ್ತಿದ್ದರು.  ರಾಜ್ಯದಲ್ಲಿರುವ ಅಲಕ್ಷ್ಮಿ ರಾಜ್ಯಕಂಟಕರನ್ನು ಸೇರಲಿ, ಮತ್ತೆ ಬಾರದಿರಲಿ ಎನ್ನುವದಕ್ಕೆ ಅನೇಕ ವಿಧಿಗಳನ್ನು ಶಾಸ್ತ್ರ ತಿಳಿಸುತ್ತದೆ.

**ಏವಂ ಗತೇ ನಿಶೀಥೇ ತು**
**ಜನೇ ನಿದ್ರಾರ್ಧಲೋಚನೇ ।**
**ತಾವನ್ನಗರನಾರೀಭಿಃ**
**ಶೂರ್ಪಡಿಂಡಿಮವಾದನೈಃ ।**
**ನಿಷ್ಕಾಸ್ಯತೇ ಪ್ರಹೃಷ್ಟಾಭಿಃ**
**ಅಲಕ್ಷ್ಮೀಃ ಸ್ವಗೃಹಾಂಗಣಾತ್ ।**

ಮನೆಗಳಲ್ಲಿ ಅದರ ಪದ್ಧತಿ ಬೇರೆಯ ರೀತಿಯಲ್ಲಿದೆ.

ಹಬ್ಬದ ದಿವಸ, ಶುಕ್ರವಾರ ಮಂಗಳವಾರಗಳ ದಿವಸ, ಹುಣ್ಣಿಮೆ ಅಮಾವಾಸ್ಯೆಗಳ ದಿವಸ ಪೊರಕೆಯನ್ನು ತರಬಾರದು. ಮತ್ತು ಸೂರ್ಯಾಸ್ತವಾದ ನಂತರ ಮನೆಯಲ್ಲಿ ಗುಡಿಸಬಾರದು.

ಆದರೆ ಈ ಆಶ್ವಯುಜ ಅಮಾವಾಸ್ಯೆಯ ದಿವಸ ಹೊಸದಾದ ಒಂದು ಪೊರಕೆಯನ್ನು ತಂದು ಅರ್ಧರಾತ್ರಿಯ ನಂತರ ಕಸ ಗುಡಿಸಿ, ಆ ಕಸ ಮತ್ತು ಪೊರಕೆಗಳನ್ನು ಮನೆಯಿಂದ ಹೊರ ಹಾಕಬೇಕು.

ಹೊರ ಹಾಕುವ ಸಂದರ್ಭದಲ್ಲಿ ಅಲಕ್ಷ್ಮಿಯ ದುಷ್ಟವಾದ ರೂಪವನ್ನೊಮ್ಮೆ ನೆನೆದು ಎಂದಿಗೂ ನಮ್ಮಲ್ಲಿ ಬರಬೇಡ ಎಂದು ಹೇಳಿ, ಅವಳು ಮತ್ತೆ ಬಾರದಿರಲಿ ಎಂದು ಪಾರ್ವತೀಶ, ಭಾರತೀಶ, ಲಕ್ಷ್ಮೀನಾರಾಯರಣರನ್ನು ಪ್ರಾರ್ಥಸಿ ಆ ಪೊರಕೆಯನ್ನು ಮನೆಯ ಅಂಗಳದಿಂದ ಹೊರಗೆ ಬಿಸಾಡಬೇಕು.

ಅಲಕ್ಷಿಯದು ಕೆಟ್ಟ ಕರಿಯ ಬಣ್ಣ[5]. ಎರಡು ಕೈಗಳು. ಕರೀ ಬಟ್ಟೆ. ಕಬ್ಬಿಣದ ಆಭರಣಗಳು. ಗಂಟುಗಂಟಿರುವ ಕುಂಕುಮ ಹಚ್ಚಿಕೊಂಡವಳು. ಕೈಯಲ್ಲಿ ಪೊರಕೆ ಹಿಡಿದಿದ್ದಾಳೆ. ಕತ್ತೆ ಅವಳ ವಾಹನ. ತಾನಿದ್ದ ಕಡೆಯಲ್ಲಿ ಜಗಳ, ದಾರಿದ್ರ್ಯವನ್ನುಂಟು ಮಾಡುವದು ಅವಳ ಕಾಯಕ.

ಕಲಿಯ ಹೆಂಡತಿಯಾದ ಆ ಅಲಕ್ಷ್ಮಿಯ ದುಷ್ಟರೂಪವನ್ನೊಮ್ಮೆ ಹೇವರಿಕೆಯಿಂದ ನೆನೆದು ಕಲಿಯ ಪ್ರಭಾವಕ್ಕೆ ಎಂದಿಗೂ ಒಳಗಾಗದ ಶ್ರೀಮದಾಚಾರ್ಯರ ಅಂತರ್ಯಾಮಿಯಾದ ಲಕ್ಷ್ಮೀಪತಿಯನ್ನು ಭಕ್ತಿಯಿಂದ ನೆನೆದು ಕಲಿ, ಕಲಿಪತ್ನಿಯರ ಕಾಟ ನಮಗಿರದರಲಿ ಎಂದು ಅವರನ್ನು ಪ್ರಾರ್ಥಿಸಿಕೊಂಡು, ತೊಲಗು ಎಂದು ಹೇಳಿ ಪೊರಕೆಯನ್ನು ಸಂತೋಷದಿಂದ ಬಿಸಾಡಬೇಕು.

ಮನೆಯನ್ನು ಸ್ವಚ್ಛವಾಗಿಡಿಸುವ ಪೊರಕೆಯೂ ಶ್ರೇಷ್ಠವಾದದ್ದೇ. ಅದಕ್ಕಾಗಿಯೇ ಮನೆಯ

---

5 "अलक्ष्मीं कृष्णवर्णां द्विभुजां कृष्णवस्त्रपरीधानां लौहाभरणभूषितां शर्कराचन्दनचर्चितां गृहसम्मार्जनीहस्तां गर्दभारूढां कलहप्रियाम्"।

ಪೊರಕೆಯನ್ನು ಬಳಸದೇ ಹೊಸದೊಂದನ್ನು ತಂದು ಅದರಿಂದ ಗುಡಿಸಿ ಬಿಸಾಡುವ ಕ್ರಮವಿದೆ.

ಪೊರಕೆ ಅವಳ ಅಸ್ತ್ರ, ಭೂಷಣವಾದ್ದರಿಂದ ಅದನ್ನು ಬಿಸುಟರೆ ಅವಳನ್ನು ಹೊರ ಹಾಕಿದಂತಾಗುತ್ತದೆ.

ಆ ನಂತರ ಕಾಲು ತೊಳೆದುಕೊಂಡು ಮನೆಯ ಒಳಗೆ ಬಂದು ದೀಪಗಳು ಆರದಂತೆ ಬೆಳಗಿಸಿ ಗುರುಗಳಿಗೆ, ಲಕ್ಷ್ಮೀನಾರಾಯಣರಿಗೆ ವಂದಿಸಿ ನಿದ್ರೆಯನ್ನು ಮಾಡಬೇಕು.

ಕಲಹ, ಅಜ್ಞಾನ, ದಾರಿದ್ರ್ಯ ಮುಂತಾದ ಸಕಲ ದೋಷಗಳಿಗೆ ಆಕರರಾದ ಕಲಿ, ಕಲಿಪತ್ನಿಯರ ಕಾಟ ಉಂಟಾಗದಂತೆ ಶ್ರೀಮದಾಚಾರ್ಯರು ನಮ್ಮೆಲ್ಲರನ್ನು ಅನುಗ್ರಹಿಸಲಿ ಎಂಬ ಪ್ರಾರ್ಥನೆಯೊಂದಿಗೆ

— ವಿಷ್ಣುದಾಸ ನಾಗೇಂದ್ರಾಚಾರ್ಯ

# ವಿಶ್ವನಂದಿನಿಗೆ ಸಜ್ಜನರ ಸಹಾಯದ ಅಗತ್ಯವಿದೆ

ಪರಮಾತ್ಮನನ್ನು ತಿಳಿಸಿಕೊಡುವ ದಿವ್ಯಗ್ರಂಥಗಳನ್ನು ತಿಳಿಯಾದ ಭಾಷೆಯಲ್ಲಿ ಸಜ್ಜನರಿಗೆ ತಲುಪಿಸಲು ವಿಶ್ವನಂದಿನಿ 10000 ಗಂಟೆಗಳ ಉಪನ್ಯಾಸಗಳ ಗುರಿಯನ್ನೂ, 30000 ಪುಟಗಳ ಲೇಖನದ ಗುರಿಯನ್ನೂ ಹೊಂದಿದೆ.

ವಿಶ್ವನಂದಿನಿಯ ಎಲ್ಲ ಉಪನ್ಯಾಸಗಳೂ, ಲೇಖನಗಳೂ ಪ್ರತಿಯೊಬ್ಬರಿಗೂ ಉಚಿತವಾಗಿ ಲಭ್ಯ.

ಈ ಬೃಹತ್ ಜ್ಞಾನಸತ್ರ ನಿಮ್ಮ ನೆರವಿಲ್ಲದೇ ಮುಂದುವರೆಯಲು ಸಾಧ್ಯವಿಲ್ಲ.

ಈ ಜ್ಞಾನಕಾರ್ಯಕ್ಕೆ ನೆರವು ನೀಡುವ ಸಜ್ಜನರು ಕೆಳಗಿನ ಖಾತೆಗೆ ಹಣವನ್ನು ವರ್ಗಾಯಿಸಬಹುದು

- **Account Name** **VISHWANANDINI**
- **Account Number** **35368588017**
- **Account Type** **Current Account**
- **Bank** **State Bank of India**
- **Branch** **T. Narasipura, Mysore**
- **IFSC** **SBIN0013233**

Please WhatsApp the transaction details to
**9901551491**

ಈಗಾಗಲೇ ನೆರವು ನೀಡಿದ, ನೀಡುತ್ತಿರುವ ಸಜ್ಜನರಿಗೆ
ನನ್ನ ಮನಃಪೂರ್ವಕ ಕೃತಜ್ಞತೆಗಳು.

**ನೀವು ವಿಶ್ವನಂದಿನಿಯ ಖಾತೆಗೆ ಹಣವನ್ನು ವರ್ಗಾಯಿಸುವಾಗ**

**“ವಿಶ್ವನಂದಿನಿ ಗಮ್ಯ ತಲುಪಲಿ”**

**ಎಂದು ಗುರುದೇವತೆಗಳಗೆ,**
**ಶ್ರೀ ವೇದವ್ಯಾಸದೇವರಿಗೆ**
**ಪ್ರಾರ್ಥನೆ ಸಲ್ಲಿಸುವದನ್ನು ಮರೆಯಬೇಡಿ.**

ಸಜ್ಜನರ ಪ್ರಾರ್ಥನೆಯನ್ನು
ಶ್ರೀಹರಿ ಮನ್ನಿಸುತ್ತಾನೆ.

— ವಿಷ್ಣುದಾಸ ನಾಗೇಂದ್ರಾಚಾರ್ಯ


**Vishnudasa Nagendracharya**

No. 2, “Sri Madhwanuja Mandiram"
Kaveri Marga, Hemmige Village,
Talakadu, T Narasipura,
Mysore - 571122, Karnataka, India

nagendracharya@yahoo.co.in

WhatsApp: 9901 551 491